# ಕಾಸಿಗಾಗಿ ಸುದ್ದಿ: ಲೋಕಾಯುಕ್ತ ಖೇದ

ಬೆಂಗಳೂರು: ಪ್ರಜಾಪ್ರಭುತ್ವ ನಾಲ್ಕನೇ ಅಂಗವಾದ ಮಾಧ್ಯಮವೂ ಇಂದು ಕಾಸಿಗಾಗಿ ಸುದ್ದಿ ಮಾಡುವಂತಾಗಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಆತಂಕ ವ್ಯಕ್ತಪಡಿಸಿದರು.

ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ ಹಮ್ಮಿಕೊಂಡಿದ್ದ ಜಾಗೃತಿ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಭ್ರಷ್ಟಾಚಾರ ಒಂದು ಮಾರಕ ರೋಗ. ಇದನ್ನು ಪ್ರಾಥಮಿಕ ಹಂತದಲ್ಲೇ ನಿಯಂತ್ರಿಸಬೇಕು. ಇಲ್ಲವಾದರೆ ಸೋಂಕಿನ ರೂಪದಲ್ಲಿ ಎಲ್ಲಾ ಕ್ಷೇತ್ರಕ್ಕೂ ವ್ಯಾಪಿಸಲಿದೆ ಎಂದರು.

ಆಸ್ತಿ ವಿವರ ನೀಡಲು ಮೀನಾ ಮೇಷಾ ಎಣಿಸುತ್ತಿರುವ ನ್ಯಾಯಾಧೀಶರು ಇತ್ತೀಚಿನ ದಿನಗಳಲ್ಲಿ ಹೊರಬರುತ್ತಿರುವ ಹಗರಣ ಕಂಡರೆ ಅಸಹ್ಯಪಡುವಂತಾಗಿದೆ.

ಕಾನೂನು ಚೌಕಟ್ಟಿನಲ್ಲಿ ದುಡಿದು ಆಸ್ತಿ ಮಾಡಿದರೆ ಸಂಪೂರ್ಣ ತೃಪ್ತಿ ಅನುಭವಿಸಬಹುದು. ಆದರೇ ಭ್ರಷ್ಟಾಚಾರದಿಂದ ಗಳಿಸಿದ ಶ್ರೀಮಂತಿಕೆ ಅಂದಿನ ದಿನಕ್ಕೆ ಸೀಮಿತ. ಮಾರನೇ ದಿನಕ್ಕೆ ಮತ್ತೆ ಭ್ರಷ್ಟಾಚಾರದಲ್ಲಿ ತೊಡಗಿಸಿಕೊಳ್ಳಲು ಮನಸ್ಸು ಮಾಡಬೇಕಾಗುತ್ತದೆ ಹೀಗಾಗಿ ಜೀವನ ಪೂರ್ತಿ ದು:ಖದಿಂದ ಕಳೆಯಬೇಕಾಗುತ್ತದೆ ಎಂದರು.

Hosadigantha Kannada Daily
03/11/10